## ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು

ಸಿ.ಸಿ. 196/2020

ಡಿ.ಡಬ್ಲ್ಯೂ,1

ದಿಃ **06.01.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ಸುನೀಲ್ ಬಿ ಎಸ್ |
| ಗಂಡ/ತಂದೆಯ ಹೆಸರು | ಲೇಟ್ ಶಿವಣ್ಣ ಶೆಟ್ಟಿ |
| ವಯಸ್ಸು | 47 ವರ್ಷ |
| ಕೆಲಸ | ಕೆ ಎಸ್ ಆರ್ ಟಿ ಸಿ ಕಂಡಕ್ಟರ್ |
| ವಾಸಸ್ಥಳ | ಮೈಸೂರು |

**ಮುಖ್ಯ ವಿಚಾರಣೆ ಆರೋಪಿ ಪರ ಶ್ರೀ ಡಿ ಪಿ ವಕೀಲರಿಂದ:**

1994 ರಿಂದ ದೂರುದಾರರು ನನ್ನ ಸಹಪಾಠಿ. ಪ್ರಶಾಂತ್ ಎಂ ಆರ್ ಎನುವವರು ನನ್ನ ಬಳಿ ಬಂದು ಹೆಬ್ಬಾಳಿನಲ್ಲಿ ಕೆಮಿಕಲ್ ಇಂಡಸ್ಟ್ರಿ ಮಾಡಲು ಒಂದು ಲಕ್ಷ ಹಣ ಬೇಕೆಂದು ಕೇಳಿದ್ದರು. ನನ್ನ ಬಳಿ ಇಲ್ಲ ಎಂದು ಹೇಳಿದೆ. ಸ್ನೇಹಿತರ ಬಳಿ ಹಣ ಕೇಳಿ ನೀಡಿ ಎಂದು ಹೇಳಿದರು. ನಾನು ಫಿರ್ಯಾದಿಗೆ ಹಣವನ್ನು ಕೇಳಿದೆ. ಫಿರ್ಯಾದಿ ಒಂದು ಲಕ್ಷ ರೂಗಳನ್ನು ಶೇ.3 ರಂತೆ ಬಡ್ಡಿಗೆ ನೀಡುತ್ತೇನೆ ಎಂದು ಹೇಳಿದರು. ನಾನು ಆಗ ಪ್ರಶಾಂತ್ ರವರನ್ನು ಕರೆದುಕೊಂಡು ಫಿರ್ಯಾದಿಯ ಬಳಿ ಹೋದೆ. ಆಗ ಫಿರ್ಯಾದಿ ಹಣವನ್ನು ನೀಡಲು ಒಪ್ಪಿ ಖಾಲಿ ಚೆಕ್ ಗೆ ಸಹಿಯನ್ನು ಮಾಡಿಕೊಡಿ ಎಂದು ಹೇಳಿದ್ದರು. ಹಣವನ್ನು ಫಿರ್ಯಾದಿ ಪ್ರಶಾಂತ್ ರವರಿಗೆ ನನ್ನ ಸಮಕ್ಷಮ ನೀಡಿದ್ದರು. ನನಗೆ ಗ್ಯಾರಂಟರ್ ಆಗಿ ಚೆಕ್ಕನ್ನು ನೀಡಿ ಎಂದು ಹೇಳಿದ್ದರು, ನಾನು ಒಪ್ಪಿ ಚೆಕ್ಕನ್ನು ನೀಡಿದ್ದೆ. ನಂತರ ಪ್ರಶಾಂತ್ ರವರಿಗೆ ಫ್ಯಾಕ್ಟರಿ ಲಾಸ್ ಆಗಿ ಅವರು ಮೈಸೂರನ್ನು ಬಿಟ್ಟು ತಲೆ ಮರಿಸಿಕೊಂಡರು.

ಫಿರ್ಯಾದಿ ನೀವು ಹೇಳಿ ಹಣವನ್ನು ತೆಗೆದುಕೊಂಡಿದ್ದಿರಿ ನನ್ನ ಚೆಕ್ ನ ಮೇಲೆ 4 ಲಕ್ಷ ಹಣ ಎಂದು ಬರೆದು ಮೈಸೂರಿನಲ್ಲಿ ಪ್ರಕರಣವನ್ನು ಹೂಡಿದ್ದರು. ಮೈಸೂರಿನ ನ್ಯಾಯಾಲಯಕ್ಕೆ ಪ್ರಶಾಂತ್ ರವರು ಬಂದಿರುತ್ತಾರೆ. ಪ್ರಶಾಂತ್ ರವರು ಒಂದು ಲಕ್ಷ ಹಣವನ್ನು 4 ಕಂತಿನಲ್ಲಿ ಕೊಡುತ್ತೇನೆಂದು ಒಪ್ಪಿದ್ದರು. ಇಷ್ಟಾದರೂ ಸಹ ಫಿರ್ಯಾದಿ ಸುಳ್ಳು ಪ್ರಕರಣವನ್ನು ನೀಡಿ ನನಗೆ ತೊಂದರೆ ನೀಡುತ್ತಿದ್ದಾರೆ. ಪ್ರಶಾಂತ್ ರವರು ನ್ಯಾಯಾಲಯಕ್ಕೆ ಬಂದು ಸಾಕ್ಷಿಯನ್ನು ಹೇಳಲು ಒಪ್ಪಿರುತ್ತಾರೆ.

**<u>ಪಾಟೀ ಸವಾಲು ದೂರುದಾರರ ಪರ ವಕೀಲರಿಂದಃ</u>**

ಪಾಟೀಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಿ ಪಾಟೀಸವಾಲನ್ನು ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಒಂದನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು.